[ Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 533/2024**

ಪಿಡ್ಬ್ಲೂಃ 2 ಸಿಡ್ಲ್ಯೂಃ 2

ಸಾಕ್ಷಿದಾರನ ಹೆಸರು : ಸಚಿತ್ ಪೂಜಾರಿ

ತಂದೆಯ ಹೆಸರು : ಭೋಜಾ ಪೂಜಾರಿ

ಪ್ರಾಯ : 31 ವರ್ಷ

ಉದ್ಯೋಗ : ಖಾಸಗಿ

ವಾಸ : ಮಾವಿನಕಟ್ಟೆ ನಂದಳಿಕೆ ಗ್ರಾಮ , ಕಾರ್ಕಳ

ದಿನಾಂಕ 24.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ನಾನು ನೋಡಿದ್ದೇನೆ.

ಚಾಸಾ-1 ರವರ ಪರಿಚಯ ಇದೆ. ಅವರು ನಮ್ಮ ನೆರೆಕರೆಯವರು. ಚಾಸಾ-3 ರವರ ಪರಿಚಯ ಇರುವುದಿಲ್ಲ. ಚಾಸಾ-4 ಮತ್ತು 5 ರವರ ಪರಿಚಯ ಇದೆ.

ದಿಃ25.01.2024 ರಂದು ನಾನು ನನ್ನ ಕಾರನ್ನು ಸರ್ವಿಸ್ ಮಾಡಿ ನಂದಳಿಕೆಯಲ್ಲಿ ಸರಿಯಾಗಿದೆಯೇ ಎಂದು ಪರಿಶೀಲಿಸುತ್ತಿರುವಾಗ ಸಂಜೆ ಸುಮಾರು 3.30 - 4.00 ಗಂಟೆಗೆ ಮಧ್ಯದಲ್ಲಿ ವಿರುದ್ಧ ದಿಕ್ಕಿನಿಂದ ಬಿಳಿ ಬಣ್ಣದ ಕಾರು ಕಾರ್ಕಳದಿಂದ ಪಡುಬ್ರಿದ್ರೆ ಕಡೆಗೆ ಅತೀವೇಗವಾಗಿ ಬರುತ್ತಿತ್ತು. ಸದ್ರಿ ಕಾರಿನ ಟಯರ್ ನಲ್ಲಿ ಹೊಗೆ ಬರುತ್ತಿತ್ತು. ನಾನು ಅದನ್ನು ನೋಡಲು ಹೋದಾಗ, ಬೆಳ್ಮಣ್ ಕಡೆಯಿಂದ ಕಾರ್ಕಳ ಕಡೆಗೆ ಬರುತ್ತಿರುವ ಸಿಲ್ವರ್ ಬಣ್ಣದ

ಕಾರಿಗೆ ಬಿಳಿ ಬಣ್ಣದ ಕಾರು ಹಿಂದಿನ ಬಲ ಭಾಗದ ಬಾಗಿಲಿಗೆ ಡಿಕ್ಕಿಹೊಡೆಯಿತು. ಸದ್ರಿ ಸಿಲ್ವರ್ ಬಣ್ಣದ ಕಾರಿನಲ್ಲಿ ಒಬ್ಬ ಮಹಿಳೆ ಇದ್ದರು. ಅವರ ಕಾರಿನ ಬಾಗಿಲನ್ನು ತೆಗೆದು ನೋಡಿದಾಗ ಆಕೆ ಪ್ರಜ್ಞೆ ತಪ್ಪಿರುತ್ತಾರೆ. ಹೊರಗಿನಿಂದ ನೋಡಲು ಅವರಿಗೆ ಸಣ್ಣಪುಟ್ಟ ಗಾಯವಾದ ಹಾಗೇ ಕಾಣುತ್ತಿತ್ತು, ಅವರನ್ನು ನನ್ನ ಕಾರಿನಲ್ಲಿ ಕಾರ್ಕಳದ ಸಿಟಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಸಿಟಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆಯುವ ಸಲುವಾಗಿ ಮಣಿಪಾಲ ಕೆಎಂ ಸಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು. ಮಣಿಪಾಲ ಆಸ್ಪತ್ರೆಯಲ್ಲಿ ವೈದ್ಯರು 10-15 ನಿಮಿಷಗಳ ಕಾಲ ಆಕೆಯನ್ನು ಪರೀಕ್ಷಿಸಿದರು. ನಂತರ ನನಗೆ ಮತ್ತು ಚಾಸಾ-5 ರವರಿಗೆ ಆಕೆ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಈ ಅಪಘಾತಕ್ಕೆ ಬಿಳಿ ಬಣ್ಣದ ಕಾರನ್ನು ಅತೀವೇಗವಾಗಿ ಚಲಾಯಿಸಿಕೊಂಡು ಬಂದಿರುವುದೇ ಕಾರಣವಾಗಿರುತ್ತದೆ.

ದಿಃ26.01.2024 ರಂದು ನಾನು ಪೊಲೀಸರಿಗೆ ಅಪಘಾತ ಸ್ಥಳವನ್ನು ತೋರಿಸಿಕೊಟ್ಟಿರುತ್ತೇನೆ. ಆ ಸಮಯದಲ್ಲಿ ಚಾಸಾ-4 ಮತ್ತು 5 ರವರು ನನ್ನ ಜೊತೆ ಇದ್ದರು. ಪೊಲೀಸರು ಮಹಜರು ಮಾಡುವ ವೇಳೆಯಲ್ಲಿ ಫೋಟೋವನ್ನು ತೆಗೆದಿರುತಾರೆ ಮತ್ತು ನನ್ನ ಸಹಿ ಪಡೆದಿರುತ್ತಾರೆ ಹಾಗೂ ಅಪಘಾತಕ್ಕೊಳಗಾದ ವಾಹನಗಳನ್ನು ವಶಕ್ಕೆಪಡೆದಿರುತ್ತಾರೆ.

ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಯು ತಕ್ಷೀರು ಸ್ಥಳದ ಮಹಜರು ಆಗಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಯು ತಕ್ಷೀರು ಸ್ಥಳದ ನಕಾಶೆಯನ್ನು ಆಗಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ 4 ಫೋಟೊವನ್ನು ನಿಪಿ-3 ತಯಾರಿಸುವಾಗ ತೆಗೆದ ಭಾವಚಿತ್ರವಾಗಿರುತ್ತದೆ. ಸದ್ರಿ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದ್ರಿ ಭಾವಚಿತ್ರಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಯಿತು.

ಈಗ ನನಗೆ ತೋರಿಸಿದ 2 ಫೋಟೊದಲ್ಲಿ ಅಪಘಾತಪಡಿಸಿದ ಮತ್ತು ಅಪಘಾತಕ್ಕೆ ಒಳಾಗಾದ ಕಾರು ಇದೆ. ಸದ್ರಿ ಭಾವಚಿತ್ರಗಳನ್ನು ಒಟ್ಟಾಗಿ ನಿಪಿ-6 ಎಂದು ಗುರುತಿಸಲಯಿತು.

ಈ ಅಪಘಾತದ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎಂ ಕೆ ವಿ ಕೆ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸರ್ವಿಸ್ ಮಾಡಿದ ಕಾರು ನನ್ನದು. ನಾನು ನಾಲ್ಕುವರೆ ವರ್ಷದಿಂದ ಡ್ರೈವಿಂಗ್ ಮಾಡುತ್ತಿದ್ದೇನೆ. ಸಾಮಾನ್ಯವಗಿ ಎದುರಿನಿಂದ ಬಂದ ಕಾರನ್ನು ನೋಡಿದರೆ ಬ್ರೇಕ್ ಹಾಕುವ ಕ್ರಮ ಇದೆ. ಬ್ರೇಕ್ ಹಾಕಿದ ಕೂಡಲೇ ಕಾರು ನಿಧನಾವಾಗಿ ಚಲಿಸುತ್ತದೆ. ಘಟನೆ ನಡೆದ ದಿನ ಪೊಲೀಸರು ಘಟನಾ ಸ್ಥಳಕ್ಕೆ ಬರುವವರೆಗೂ ನಾನು ಅಲ್ಲೆಯೇ ಇದ್ದೆ ಎಂದರೆ ಸರಿಯಲ್ಲ. ನನ್ನ ಕಾರಿನಲ್ಲಿ ಗಾಯಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ಸಾಗಿಸಿದ್ದೇನೆ. ಆದ ಕಾರಣ ಪೊಲೀಸರು ಬರುವವರೆಗೆ ನಾನು ಅಲ್ಲಿ ಇರಲಿಲ್ಲ.

ಅಪಘಾತವಾದ ಸ್ಥಳ ತಿರುವಿನಿಂದ ಕೂಡಿದೆ. ನಾನು ಈಗ ನೋಡುತ್ತಿರುವ ಫೋಟೋದಲ್ಲಿ ತೋರಿಸಿದ ತಿರುವು ಅಪಘಾತವಾದ ಸ್ಥಳದ ತಿರುವು ಎಂದರೆ ಸರಿ. ಸದ್ರಿ ಫೋಟೋವನ್ನು ನಿಡಿ-3 ಎಂದು ಗುರುತಿಸಲಾಗಿದೆ.

ಈಗ ನನಗೆ ತೋರಿಸಿದ 2 ಫೋಟೋದಲ್ಲಿ ಅಪಘಾತವಾದ 2 ವಾಹನಗಳು ಕಾಣುತ್ತವೆ ಎಂದರೆ ಸರಿ. 2 ಕಾರುಗಳಿಗೆ ಅಪಘಾತದಿಂದ ಜಖಂ ಆಗಿರುವುದು ಕಾಣುತ್ತದೆ. ಸದ್ರಿ ಭಾವಚಿತ್ರಗಳನ್ನು ನಿಡಿ-4 ಮತ್ತು 5 ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ನಿಡಿ-1 ರಲ್ಲಿ ಆರೋಪಿ ಚಲಾಯಿಸುತ್ತಿದ್ದ ಬಿಳಿ ಬಣ್ಣದ ಕಾರು ಇದೆ. ಈಗ ನನಗೆ ತೋರಿಸಿದ ನಿಪಿ-5 ರಲ್ಲಿ ಕಾಣುವ ಸ್ಥಳ ಅಪಘಾತ ಸ್ಥಳ ಸದ್ರಿ ಸ್ಥಳದಲ್ಲಿ ಬ್ರೇಕ್ ಹಾಕಿದ ಟಯರ್ ಮಾರ್ಕ್ ಕಾಣುತ್ತದೆ. ನಿಟ್ಟೆ ಕಡೆಯಿಂದ ಪಡುಬಿದ್ರೆ ಕಡೆಗೆ ಹೋಗುವ ರಸ್ತೆಯಲ್ಲಿ ಟಯರ್ ಮರ್ಕ್ ಕಾಣುತ್ತದೆ. ಸದ್ರಿ ಟಯರ್ ಮಾರ್ಕ್ ಗಳು ಆರೋಪಿ ಚಲಾಯಿಸುತ್ತಿದ್ದ ಕಾರಿನ ಟಯರ್ ಮಾರ್ಕ್ ಗಳು ಎಂದರೆ ಸರಿ. ಆರೋಪಿಯು ನಿಟ್ಟೆ ಕಡೆಯಿಂದ ಪಡುಬಿದ್ರೆ ಕಡೆಗೆ ಆರೋಪಿ ಚಲಾಯಿಸುತ್ತಿದ್ದರು. ನಿಪಿ-5 ರಲ್ಲಿ ಕಾಣುವ

ಟಯರ್ ಮಾರ್ಕ್ ನ್ನು ನಿಪಿ-5(ಎ) ಮತ್ತು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸದ್ರಿ ನಿಪಿ-5 ರಲ್ಲಿ ನಿಪಿ-5(ಎ) ಮತ್ತು ನಿಪಿ-5(ಬಿ) ಕೊನೆಗೊಳ್ಳುವಲ್ಲಿ ಆರೋಪಿ ವಾಹನ ನಿಂತಿದೆ ಎಂದರೆ ಸರಿ. ಅಪಘಾತದ ಇನ್ನೊಂದು ವಾಹನ ಎದುರಿನಿಂದ ಅಂದರೆ ಪಡುಬಿದ್ರೆಯಿಂದ ನಿಟ್ಟೆ ಮುಂದುವರೆದು ಕಾರ್ಕಳಕ್ಕೆ ಹೋಗುವ ರಸ್ತೆ ಆಗಿದೆ ಎಂದರೆ ಸರಿ.

ನಿಡಿ 1 ಮತ್ತು ನಿಪಿ-5 ರಲ್ಲಿ ರಸ್ತೆಯ ಮೇಲೆ ಬಿಳಿ ಪಟ್ಟಿ ಇದೆ, ಅದು ಪಟ್ಟಿಯ ಒಂದು ಬದಿಯಲ್ಲಿ ವಾಹನಗಳು ನಿಟ್ಟೆಯಿಂದ ಪಡುಬಿದ್ರೆ ಕಡೆಗೆ ಮತ್ತು ಇನ್ನೊಂದು ಬದಿಯಲ್ಲಿ ಪಡುಬಿದ್ರೆಯಿಂದ ನಿಟ್ಟೆ ಕಡೆಗೆ ಹೋಗುತ್ತವೆ ಎಂದರೆ ಸರಿ. ನನ್ನ ಗ್ರಾಮವು ಇದೆ ರಸ್ತೆಯ ಬಳಿ ಇರುತ್ತವೆ. ನಿಡಿ-1 ಮತ್ತು ನಿಪಿ-5 ರಲ್ಲಿ ಪಡುಬಿದ್ರೆಯಿಂದ ನಿಟ್ಟೆ ಕಡೆಗೆ ಬರುವ ರಸ್ತೆಯ ಭಾಗದಲ್ಲಿ ಯಾವುದೇ ಬ್ರೇಕ್ ಟಯರ್ ಮಾರ್ಕ್ ಇರುವುದಿಲ್ಲ. ಚಾಸಾ-3 ರವರು ಚಲಾಯಿಸುತ್ತಿದ್ದ ಕಾರು ತಕ್ಷೀರು ಸ್ಥಳದಲ್ಲಿ ಬ್ರೇಕ್ ಹಾಕಿರುವ ಟಯರ್ ಮಾರ್ಕ್ ಕಾಣುವುದಿಲ್ಲ. ಚಾಸಾ-3 ರವರು ಬ್ರೇಕ್ ಹಾಕಿದ್ದರೆ ಆ ಭಾಗದಲ್ಲಿ ಟಯರ್ ಮಾರ್ಕ್ ಕಾಣುತ್ತತ್ತು ಎಂದರೆ ಸರಿ. ಅಪಘಾತವು ಒಂದಕ್ಕೊಂದು ಡಿಕ್ಕಿಹೊಡೆದಿದ್ದು ತೀರಾ ಎಡಬದಿಗೂ ಹಾಗೂ ತೀರಾ ಬಲ ಬದಿಗೂ ಅಲ್ಲ ಎಂದರೆ ಸರಿ. ಈಗ ನಾನು ನೋಡಿದ ನಿಡಿ-1 ಮತ್ತು ನಿಪಿ-5 ಫೋಟೋಗಳಲ್ಲಿ ಟಯರ್ ಮಾರ್ಕ್ ಗಳು ತೀರಾ ಎಡ ಬದಿ ಹಾಗೂ ತೀರ ಬಲಬದಿಯಲ್ಲಿ ಇಲ್ಲ ಎಂದರೆ ಸರಿ.

ನಿಪಿ-3 ರಲ್ಲಿ ಏನು ಬರೆದಿದೆ ಎಂದು ಆದಷ್ಟು ಹೇಳಬಹುದು. ನನ್ನ ಜೊತೆಯಲ್ಲಿ ಚಾಸಾ-4 ಮತ್ತು 5 ಇದ್ದರು. ಅವರು ಅಪಘಾತವಾಗುವಾಗ ಇರಲಿಲ್ಲ. ನಾನು ಗಾಯಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಚಾಸಾ-4 ಮತ್ತು 5 ರವರಿಗೆ ಅಪಘಾತ ಹೇಗೆ ಆಯಿತು ಎಂದು ಹೇಳಿದ್ದೇನೆ. ನನ್ನ ಪೊಲೀಸರಿಗೆ ಹೇಳಿಕೆ ನೀಡುವ ಸಮಯದಲ್ಲಿ ಕಾರು ಶೋ ರೂಮ್ ನ ಒಬ್ಬ ವ್ಯಕ್ತಿ ಅಪಘಾತವಾಗುವಾಗ ನನ್ನ ಜೊತೆ ಇದ್ದ ಬಗ್ಗೆ ಹೇಳಿರುವುದಿಲ್ಲ.

ನನ್ನ ಕಾರನ್ನು ರಸ್ತೆಯ ಎಡ ಬದಿಯಲ್ಲಿ ನಿಲ್ಲಿಸಿ ಪರಿಶೀಲಿಸುತ್ತಿದ್ದೆ. ನನಗೆ ಕಾರಿಗೆ ಬ್ರೇಕ್ ಹಾಕಿದಾಗ ಉಂಟಾಗುವ ಟಯರ್ ಶಬ್ದ ಕೇಳಿ ನೋಡಲು ಹೋಗಿರುತ್ತೇನೆ. ನಾನು ಹಾಗೇ ನೋಡುವಾಗ ಅಪಘಾತಕ್ಕೆ ಒಳಗಾದ ಕಾರು ರಸ್ತೆಯ ತೀರಾ ಬಲಭಾಗಕ್ಕೆ

ಚಲಾಯಿಸಿಕೊಂಡು ಬರುತ್ತಿರಲಿಲ್ಲ. ಪೊಲೀಸರಿಗೆ ಹೇಳಿಕೆ ನೀಡುವಾಗ ಕಾರ್ಕಳದ ಕಡೆಯಿಂದ ಬೆಳ್ಮಣ್ ಕಡೆಗೆ ಆರೋಪಿ ತೀರಾ ಬಲಭಾಗಕ್ಕೆ ಚಲಾಯಿಸಿಕೊಂಡು ಬಂದಿರುತ್ತಾರೆ ಎಂದು ಹೇಳಿರುವುದಿಲ್ಲ. ಸದ್ರಿ ಹೇಳಿಕೆಯ ಭಾಗವನ್ನು ನಿಡಿ-6 ಎಂದು ಗುರುತಿಸಲಾಯಿತು.

ನಾನು ಆಸ್ಪತ್ರೆಯಿಂದ ವಾಪಸ್ಸು ಬಂದಾಗ ಕಾರುಗಳು ಒಂದಕ್ಕೊಂದು ಢಿಕ್ಕಿಯಾದ ರೀತಿಯಲ್ಲಿ ಸ್ಥಳದಲ್ಲಿ ಇತ್ತು ಎಂದರೆ ನಾನು ಅಪಘಾತ ಸ್ಥಳಕ್ಕೆ ಹೋಗಿರುವುದಿಲ್ಲ. ಮರುದಿನ ಮಹಜರು ವೇಳೆಯಲ್ಲಿ ಕಾರುಗಳು ಒಂದಕ್ಕೊಂದು ಢಿಕ್ಕಿಯಾದ ರೀತಿಯಲ್ಲಿ ಇರಲಿಲ್ಲ ಅವುಗಳನ್ನು ಸ್ಥಳಾಂತರಿಸಿದ್ದರು. ಒಂದು ಕಾರು ರಸ್ತೆಯ ಮಣ್ಣಿನ ಭಾಗದಲ್ಲಿ ಇನ್ನೊಂದು ಕಾರು ಇನ್ನೊಂದು ಬದಿಯಲ್ಲಿ ಮಣ್ಣಿನ ಭಾಗದಲ್ಲಿ ಇತ್ತು. ಆರೋಪಿಯ ಕಾರಿನ ಟಯರ್ ಮಾರ್ಕ್ ಗಳು ಹಾಗೇಯೇ ಇದ್ದವು.

ಅಪಘಾತವಾದ ರಸ್ತೆಯು ರಾಜ್ಯ ಹೆದ್ದಾರಿ. ಸದ್ರಿ ಹೆದ್ದಾರಿಯಲ್ಲಿ ಬಸ್ಸುಗಳು , ಘನವಾಹನಗಳು ದಿನವಿಡಿ ಚಲಿಸುತ್ತವೆ ಎಂದರೆ ಸರಿ. ಅಪಘಾತವಾದ ದಿನ ಕಾರ್ಕಳದ ಅತ್ತೂರಿನಲ್ಲಿ ಸಂತ ಮರಿಯಾ ಹಬ್ಬ ಇದ್ದು ಪಡುಬಿದ್ರೆ ಕಡೆಯಿಂದ ಕಾರ್ಕಳ ಕಡೆಗೆ ವಿಶೇಷ ಬಸ್ಸುಗಳು , ಕಾರುಗಳು ಹಾಗೂ ಇತರೆ ವಾಹನಗಳು ಸಂತ ಮರಿಯಾ ಚರ್ಚ್ ಗೆ ಹೋಗುವ ವಾಹನಗಳು ಇದ್ದವು. ಹಗಲಿನಲ್ಲಿ ಕಾರ್ಕಳದ ಕಡೆಗೆ ಮತ್ತು ಹಬ್ಬದ ಮುಗಿದು ರಾತ್ರಿಯಲ್ಲಿ ಪಡುಬಿದ್ರೆ ಕಡೆಗೆ ಹೋಗುತ್ತಿದ್ದರು. ಅದನ್ನು ನಿಯಂತ್ರಿಸಲು ಪೊಲೀಸರು ಅಲ್ಲಲ್ಲಿ ರಸ್ತೆಯಲ್ಲಿ ಇದ್ದರು.

ಸಂತ ಮರಿಯಾ ಹಬ್ಬದ ಸಮಯದಲ್ಲಿ ಸಾಮಾನ್ಯವಾಗಿ ವಾಹನಗಳು ಒಂದಕ್ಕೊಂದು ಓವರ್ ಟೇಕ್ ಮಾಡಿಕೊಂಡು ಹಾಗೂ ಅತೀವೇಗವಾಗಿ ಚಲಿಸುತ್ತವೆ ಎಂದರೆ ಸರಿ. ಅಪಘಾತವಾದ ರಸ್ತೆಯನ್ನು ಟಯರ್ ನ ಶಬ್ದ ಕೇಳುವ ವರೆಗೆ ರಸ್ತೆಯನ್ನು ಗಮನಿಸುತ್ತಿರಲಿಲ್ಲ. ವಾಹನಗಳು ಒಂದಕ್ಕೊಂದು ಓವರ್ ಟೇಕ್ ಮಾಡಿಕೊಂಡು ಹೋಗುತ್ತಿರುವುದನ್ನು ನೋಡಿರುವುದಿಲ್ಲ. ಢಿಕ್ಕಿಯಾದ ಶಬ್ದ ಕೇಳಿ ಸುಮಾರು ಜನ ಅಲ್ಲಿ ನೆರೆದಿದ್ದರು.

ಚಾಸಾ-1 ರವರ ಪರಿಚಯ ಇದೆ. ಚಾಸಾ-1 ರವರು ನಿಪಿ-1 ಪಿರ್ಯಾದನ್ನು ನೀಡಿರುತ್ತಾರೆ. ನಿಪಿ-1 ನ್ನು ಅಪಘಾತವಾದ ದಿನಾವೊ ಅಥವಾ ಮರುದಿನ ಪೊಲೀಸರು ತಕ್ಷೀರು ಸ್ಥಳಕ್ಕೆ ಬಂದಾಗ ಕೊಟ್ಟಿರುತ್ತಾರೊ ಎಂದು ಗೊತ್ತಿಲ್ಲ. ಷದ್ರಿ ರಸ್ತೆಯಲ್ಲಿ ಬರುವಾಗ ವಾಹನಗಳು ಎದುರುಬದುರಿನಲ್ಲಿ ಬುರವಾಗ ಬ್ರೇಕ್ ಹಾಕುವುದು ಸಮಾನ್ಯ.

ನಾನು ಅಪಘಾತವನ್ನು ನೋಡದೆ ಪೊಲೀಸರು ಹೇಳಿಕೊಟ್ಟಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the CW 4 to 17. As the eye witness Pw to 3 have completly turned hostile to the case of prosecution. No purpose will be served by

issuance of summons to CW 4 to 17. Hence by rejecting the prayer of learned APP evidence of CW 4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 28-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of

prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on : 17.08.2021

Prl. Civil Judge & JMFC.
Karkala